ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 12-12-1998.

# *ನನ್ನದು, ನನ್ನದು ಎಂಬ ದೆಹಾಭಿಮಾನವನ್ನು ಬಿಟ್ಟು ಬ್ರಹ್ಮಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಹಾಕಿರಿ.*

(मेरे-मेरे का देह-अभिमान छोड़ ब्रहमा बाप के कदम पर कदम रखो)

ಇಂದು ಬಾಪ್‌ದಾದಾ ನಾಲ್ಕೂ ಕಡೆ ಇರುವ ತನ್ನ ಶ್ರೇಷ್ಠ ಬ್ರಾಹ್ಮಣಾತ್ಮರನ್ನು ನೋಡುತ್ತಿದ್ದಾರೆ. ಬ್ರಾಹ್ಮಣರು ಎಂದರೆ ಬ್ರಹ್ಮ ಮುಖ ವಂಶಾವಳಿ, ಪ್ರತಿಯೊಬ್ಬ ಬ್ರಾಹ್ಮಣಾತ್ಮನ ಭಾಗ್ಯವನ್ನು ನೋಡಿ ಬಾಪ್‌ದಾದಾರವರು ಹರ್ಷಿಸುತ್ತಿದ್ದಾರೆ. ಪ್ರತಿಯೊಬ್ಬ ಬ್ರಾಹ್ಮಣ ಆತ್ಮನಿಗೆ ಜನ್ಮದಿಂದಲೇ ಸ್ವಯಂ ಬ್ರಹ್ಮಾ ತಂದೆಯಿಂದ ಮಸ್ತಕದಲ್ಲಿ ಸ್ಮೃತಿ ತಿಲಕವು ಇಡಲ್ಪಡುತ್ತದೆ. ಸ್ವಯಂ ಭಗವಂತನು ತಿಲಕಧಾರಿಯನ್ನಾಗಿ ಮಾಡುತ್ತಿದ್ದಾರೆ. ಜೊತೆಜೊತೆಗೆ ಪ್ರತಿಯೊಬ್ಬ ಬ್ರಾಹ್ಮಣ ಆತ್ಮನಿಗೆ ಪವಿತ್ರತೆಯ ಮಹಾಮಂತ್ರದಿಂದ ಪ್ರಕಾಶ ಕಿರೀಟವನ್ನು ಧಾರಣೆ ಮಾಡಿಸುತ್ತಿದ್ದಾರೆ ಮತ್ತು ಜೊತೆ ಜೊತೆಗೆ ಪ್ರತಿಯೊಂದು ಬ್ರಾಹ್ಮಣ ಆತ್ಮನನ್ನು ವಿಶ್ವಕಲ್ಯಾಣಕಾರಿಯನ್ನಾಗಿ ತಯಾರು ಮಾಡಿ ಜವಾಬ್ದಾರಿಯ ಕಿರೀಟವನ್ನು ಧಾರಣೆ ಮಾಡಿಸುತ್ತಿದ್ದಾರೆ.  ಡಬಲ್ ಕಿರೀಟವನ್ನು ಇಡುತ್ತಿದ್ದಾರೆ ಮತ್ತು ಸ್ವಯಂ ಭಗವಂತನು ತನ್ನ ಹೃದಯ ಸಿಂಹಾಸನಾಧಿಕಾರಿಯನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಕಿರೀಟಧಾರಿ ಮತ್ತು ಸಿಂಹಾಸನಾಧಿಕಾರಿ ಆಗುತ್ತಿದ್ದೀರಿ. ಈ ರೀತಿಯಾದ ಶ್ರೇಷ್ಠ ಭಾಗ್ಯ ಇಡೀ ಕಲ್ಪದಲ್ಲಿ ಯಾವ ಆತ್ಮನಿಗೂ ಇರುವುದಿಲ್ಲ. ಬ್ರಾಹ್ಮಣರಾದ ನಾವು ಜನ್ಮದಿಂದಲೇ ಈ ವಿಧವಾದ ಭಾಗ್ಯವಂತರಾಗಿದ್ದೇವೆ ಎಂಬ  ನಿಮ್ಮ ಶ್ರೇಷ್ಠ ಭಾಗ್ಯ ಸ್ಮೃತಿಯಲ್ಲಿದೆ ಇರುತ್ತದೆಯೇ?  ಬ್ರಾಹ್ಮಣತ್ಮರಾದ ನಿಮ್ಮ ಗುರುತಾಗಿ ಪ್ರಪಂಚದಲ್ಲಿರುವವರು ಶ್ರೀಕೃಷ್ಣನ ರೂಪದಲ್ಲಿ ತೋರಿಸಿದ್ದಾರೆ. ಆದರೆ ಕೃಷ್ಣನು ವಿಶ್ವ ರಾಜಕುಮಾರನು ಆದ್ದರಿಂದ ರಾಜ್ಯಕ್ಕೆ ಗುರುತಾಗಿ ತಿಲಕ, ಕಿರೀಟ, ಸಿಂಹಾಸನವನ್ನು ತೋರಿಸುತ್ತಾರೆ. ಆದರೂ ಶ್ರೀಕೃಷ್ಣನ ಬಾಲ್ಯದಲ್ಲಿಯೇ ತಿಲಕ, ಕಿರೀಟ, ಸಿಂಹಾಸನ ಲಭಿಸುವುದಿಲ್ಲ. ಆದರೆ ಬ್ರಾಹ್ಮಣತ್ಮರಾದ ನಿಮಗೆ ತಿಲಕ, ಕಿರೀಟ, ಸಿಂಹಾಸನ ಮೂರು ಲಭಿಸುತ್ತವೆ ಪರಮಾತ್ಮ ತಂದೆಯಿಂದ ಈ ಮೂರು ಪ್ರಾಪ್ತಿಗಳು ಲಭಿಸುವುದು ಕೇವಲ ಬ್ರಾಹ್ಮಣರ ಭಾಗ್ಯದಲ್ಲಿಯೇ ಇದೆ. ನನ್ನ ಪ್ರತಿಯೊಬ್ಬ ಮಗುವಿನ ಮಸ್ತಕದಲ್ಲಿ ಇಷ್ಟು ದೊಡ್ಡ ಭಾಗ್ಯನಕ್ಷತ್ರ  ಹೊಳೆಯುತ್ತಿದೆಯೇ ಎಂದು ಬಾಪ್‌ದಾದಾ ನೋಡುತ್ತಿದ್ದಾರೆ. ಇಂತಹ ಭಾಗ್ಯದ ನಕ್ಷತ್ರ ನಿಮ್ಮಲ್ಲಿ ನಿಮಗೂ ಕಾಣಿಸುತ್ತದೆಯೇ?  ಸದಾ ಹೊಳೆಯುತ್ತಾ ಕಾಣಿಸುತ್ತದೆಯೇ ಅಥವಾ ಆಗಾಗ ಚೆನ್ನಾಗಿ ಹೊಳೆಯುತ್ತಾ ಆಗಾಗ ನಕ್ಷತ್ರದ ಹೊಳಪು ಕಡಿಮೆಯಾಗುತ್ತದೆಯೇ? ಈ ಭಾಗ್ಯನಕ್ಷತ್ರ ವಿಚಿತ್ರ ನಕ್ಷತ್ರವಾಗಿದೆ ಆದ್ದರಿಂದ ಬಾಪ್‌ದಾದಾ ಮಕ್ಕಳಾದ ನಿಮ್ಮನ್ನು ನೋಡುತ್ತಿದ್ದಾಗ ಅಥವಾ ಮಿಲನ ಮಾಡುತ್ತಿದ್ದಾಗ ಪ್ರತಿಯೊಬ್ಬ ಮಗುವಿನ ಮಸ್ತಕದಲ್ಲಿ ನಕ್ಷತ್ರವು ಹೊಳೆಯುವುದನ್ನು ನೋಡಿ ಖುಷಿಪಡುತ್ತಾರೆ. ಹೊಳೆಯುತ್ತಾ, ಹೊಳೆಯುತ್ತಾ ನಕ್ಷತ್ರದ ಹೊಳಪು  ಕಡಿಮೆಯಾಗುತ್ತಿದೆ, ಇದಕ್ಕೆ ಕಾರಣವೇನು? ನಿಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿದೆ. ಬಾಪ್‌ದಾದಾರವರಿಗೆ

ಮಕ್ಕಳ ಈ ಚಾರ್ಟನ್ನು ನೋಡಿದಾಗ ನಗು ಬರುತ್ತದೆ. ಯಾವಾಗಲಾದರೂ ಯಾರನ್ನಾದರೂ ನೀವು ಹೇಗೆ ತಯಾರಾಗುತ್ತಿರಿ? ನಿಮ್ಮ ಲಕ್ಷ್ಯವೇನು ಎಂದು ಕೇಳಿದರೆ ಹೆಚ್ಚು ಜನರು ನಾನು ನಂಬರ್‌ವನ್ ಆಗಬೇಕು, ಸೂರ್ಯವಂಶಿಯಾಗಬೇಕು ಎಂಬ ಉತ್ತರವನ್ನು ಕೊಡುತ್ತಾರೆ. ಚಂದ್ರವಂಶಿಯರಾದ ನಕ್ಷತ್ರಗಳಾಗಬೇಕು ಎಂದುಕೊಳ್ಳುವುದಿಲ್ಲ. ಹಾಗಾದರೆ ಸೂರ್ಯವಂಶಿ ನಂಬರ್‌ವನ್ ಆಗಬೇಕೆಂಬ ಲಕ್ಷ್ಯ ಇದ್ದರೆ ಎಂತಹ ಲಕ್ಷ್ಯವೋ ಅಂತಹ ಲಕ್ಷಣಗಳು ಸೂರ್ಯವಂಶಜರಲ್ಲಿ ಸದಾ ಕಾಣಿಸುವುದು ಅವಶ್ಯಕ. ಮಕ್ಕಳ ಲಕ್ಷ್ಯವು ಸೂರ್ಯವಂಶಿ ಆಗಬೇಕೆಂದು ಅರ್ಥಾತ್ ಸದಾ ವಿಜಯಿಯಾಗಬೇಕು. ನಂಬರ್‌ವನ್ ಸೂರ್ಯವಂಶಿಯರ ಗುರುತು ಸದಾ ವಿಜಯೀ. ಸೂರ್ಯನ ಕಲೆಗಳು ಯಾವಾಗಲೂ ಹೆಚ್ಚು ಕಡಿಮೆ ಆಗುವುದಿಲ್ಲ.

ಉದಯಿಸುತ್ತಾನೆ ಮತ್ತು ಅಸ್ತಮಿಸುತ್ತಾನೆ ಅಷ್ಟೇ ಆಗಲಿ ಚಂದ್ರವಂಶೀಯರಂತೆ ಕಲೆಗಳು ಕಡಿಮೆಯಾಗುವುದಿಲ್ಲ. ಆದ್ದರಿಂದ ಸೂರ್ಯವಂಶಿಯರ ಗುರುತು(ಲಕ್ಷಣ) ಸದಾ ಏಕರಸಸ್ಥಿತಿ ಮತ್ತು ಸದಾ ವಿಜಯೀ. ಚಂದ್ರ ವಂಶಿಯರನ್ನು ಕ್ಷತ್ರಿಯರು ಎಂದು ಕರೆಯುತ್ತಾರೆ. ಕ್ಷತ್ರಿಯ ಜೀವನದಲ್ಲಿ ಆಗಾಗ ಸೋಲು ಆಗಾಗ ಗೆಲುವು ಇರುತ್ತದೆ. ಆಗಾಗ ಸಫಲತಾ ಮೂರ್ತಿಯಾಗಿ ಆಗಾಗ ಶ್ರಮ ಮೂರ್ತಿಯಾಗಿ ಇರುತ್ತಾರೆ. ಯುದ್ಧ ಮಾಡುವುದು ಎಂದರೆ ಶ್ರಮ ಮಾಡುವುದು, ಚಂದ್ರವಂಶಿಯರ ಕಲೆಗಳು ಎಕರಸವಾಗಿ ಇರುವುದಿಲ್ಲ. ಆದ್ದರಿಂದ ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿ ಮಾಡಿಕೊಳ್ಳಿ. ತಂದೆಯ ಸಮಾನರಾಗಬೇಕು ಎಂದು ಹೇಗಾದರೆ ಲಕ್ಷ್ಯವನ್ನು ಇಟ್ಟುಕೊಂಡಿದ್ದೀರೋ, ತಂದೆಯ ಸಮಾನರಾಗಬೇಕು ಎಂದು ಪ್ರತಿಯೊಬ್ಬರು ಹೇಳುತ್ತಾರೆ ಆದರೆ ತಂದೆಯು ಸದಾ ವಿಜಯೀ ಸ್ವರೂಪ. ಒಂದುವೇಳೆ ಸದಾ ಏಕರಸಸ್ಥಿತಿ ಇಲ್ಲದಿದ್ದರೆ ನಂಬರ್‌ವನ್ನಾಗುತ್ತೀರಾ? ಅಥವಾ ನಂಬರ್‌ವಾರ್‌ನಲ್ಲಿ ಬರುತ್ತೀರಾ? 1.ನಂಬರ್‌ವನ್ 2. ನಂಬರ್‌ವಾರ್ ಆದ್ದರಿಂದ ನಿಮ್ಮನ್ನು ನೀವು ಕೇಳಿರಿ. ನಾವು ನಂಬರ್‌ವನ್ನಲ್ಲಿ ಬರುತ್ತೇವೆಯೇ ಅಥವಾ ನಂಬರ್‌ವಾರ್ ಪಟ್ಟಿಯಲ್ಲಿ ಬರುತ್ತೇವೆಯೇ? ಎಂದು, ನಂಬರ್‌ವನ್ ಎಂದರೆ ಬ್ರಹ್ಮಾ ತಂದೆಯನ್ನು ಅನುಸರಿಸಿರಿ.

**ಬಾಪ್‌ದಾದಾ ಸಹಜ ಸಾಧನವನ್ನು ಹೇಳುತ್ತಿದ್ದಾರೆ. ಅನುಸರಿಸುವುದರಲ್ಲಿ ಶ್ರಮ ಕಡಿಮೆಯಾಗುತ್ತದೆ. ಬ್ರಹ್ಮಾ ತಂದೆಯ ಪಾದ ಎಂದರೆ ಹೆಜ್ಜೆ. ಪ್ರತಿಯೊಂದು ಕರ್ಮ ಎಂಬ ಹೆಜ್ಜೆಗಳು ಪಾದದ ಗುರುತುಗಳು. ಪಾದದ ಗುರುತುಗಳ ಮೇಲೆ ಪಾದವನ್ನಿಟ್ಟು ನಡೆಯುವುದು ಸಹಜ. ಹೊಸ ಮಾರ್ಗವನ್ನು ಹುಡುಕುವ ಅವಶ್ಯಕತೆ ಇಲ್ಲ. ಪಾದದ ಮೇಲೆ ಪಾದ ಎಂದರೆ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಡಬೇಕು. ಯಾವ ಕಾರ್ಯ ಮಾಡುತ್ತಿದ್ದರೂ, ಮನಸಾ ಸಂಕಲ್ಪ ಮಾಡುತ್ತಿದ್ದರೂ, ವಾಚಾ ಅರ್ಥಾತ್ ಮಾತನಾಡುತ್ತಿದ್ದರೂ, ಕರ್ಮದಲ್ಲಿ ಸಂಬಂಧ ಸಂಪರ್ಕಗಳಲ್ಲಿ ಬರುತ್ತಿದ್ದರೂ, ಪ್ರತಿಯೊಂದು ಕರ್ಮವನ್ನು ಮಾಡುವ ಮೊದಲು ಯೋಚಿಸಿರಿ- ಬ್ರಾಹ್ಮಣಾತ್ಮನಾದ ನಾನು ಯಾವ ಕರ್ಮವನ್ನು ಮಾಡುತ್ತೇನೆಯೋ, ಅದು ಬ್ರಹ್ಮಾ ತಂದೆಯ ಸಮಾನವಾಗಿ ಇದೆಯೇ? ಬ್ರಹ್ಮಾ ಬಾಬಾರವರ ಸಂಕಲ್ಪ ಯಾವ ರೀತಿ ಇರುತ್ತಿತ್ತೋ ನನ್ನ ಸಂಕಲ್ಪವೂ ಅದೇ ರೀತಿ ಇದೆಯೇ? ಪ್ರತಿಯೊಂದು ಮಾತು ಬ್ರಹ್ಮಾ ತಂದೆಯ ಸಮಾನವಾಗಿ ಇದೆಯೇ, ಒಂದುವೇಳೆ ಸಮಾನವಾಗಿ ಇಲ್ಲದಿದ್ದರೆ ಮಾಡಬಾರದು, ಯೋಚಿಸಬಾರದು, ಮಾತನಾಡಬಾರದು. ಬ್ರಹ್ಮಾ ತಂದೆಯ ಹೆಜ್ಜೆ ಒಂದಿದ್ದು ಮಕ್ಕಳ ಹೆಜ್ಜೆ ಇನ್ನೊಂದಿದ್ದರೆ ತಂದೆಯ ಸಮಾನ ಆಗಬೇಕೆಂಬ ಯಾವ ಲಕ್ಷ್ಯ ಅಥವಾ ಗುರಿ ಇದೆಯೋ**

**ಅದನ್ನು ಹೇಗೆ ತಲುಪಬಲ್ಲಿರಿ. ಬ್ರಹ್ಮಾ ತಂದೆಯ ಕರ್ಮ ಎಂಬ ಪ್ರತಿ ಹೆಜ್ಜೆಯ ಸಮಾನವಾಗಿ ಹೆಜ್ಜೆ ಹಾಕಿ ಅನುಸರಿಸಿದರೆ ಸದಾ ಸ್ವಯಂನ್ನು ಸಹಜ ಪುರುಷಾರ್ಥಿಯನ್ನಾಗಿ ಅನುಭವ ಮಾಡಿಕೊಳ್ಳುತ್ತೀರಿ. ಮತ್ತು ಸದಾ ಸಂಪೂರ್ಣತೆ ಎಂಬ ಗುರಿಯನ್ನು ಸಮೀಪವಾಗಿ ಅನುಭವ ಮಾಡಿಕೊಳ್ಳುತ್ತೀರಿ.**

ಬ್ರಹ್ಮಾ ತಂದೆಯ ಸಮಾನರಾಗುವುದು ಎಂದರೆ ಸಂಪೂರ್ಣತೆ ಎಂಬ ಗುರಿಯನ್ನು ತಲುಪುವುದು. ಬ್ರಹ್ಮಾ ತಂದೆ ವತನದಲ್ಲಿ ಮಕ್ಕಳಾದ ನಿಮ್ಮೆಲ್ಲರನ್ನೂ ಸಂಪೂರ್ಣ ಅವ್ಯಕ್ತಾ ಫರಿಶ್ತಾ ಆಗಲು ಆಹ್ವಾನಿಸುತ್ತಿದ್ದಾರೆ. ಬ್ರಹ್ಮಾಬಾಬಾನ ಆಹ್ವಾನದ ಗೀತೆ, ಆಹ್ವಾನದ ಮಧುರ ಕರೆ ಕೇಳಿಸುತ್ತಿಲ್ಲವೇ? ಬನ್ನಿ ಮಕ್ಕಳೇ! ಮಧುರವಾದ ಮಕ್ಕಳೇ! ಬೇಗ ಬೇಗ ಬನ್ನಿ!! ಎಂಬ ಈ ಮಾತು ಅಥವಾ ಕರೆ ಕೇಳಿಸುತ್ತಿಲ್ಲವೇ? ಬ್ರಹ್ಮಾ ತಂದೆಯ ಕರೆಯನ್ನು ಕೇಳಿರಿ. ಗ್ರಹಿಸಿರಿ. ಬ್ರಹ್ಮಾ ತಂದೆ ಇದನ್ನೇ ಹೇಳುತ್ತಿದ್ದಾರೆ- ಮಕ್ಕಳು 99ನೇ ವರ್ಷದಲ್ಲಿ ಏನಾಗುತ್ತದೆ ಎಂದು ಹೆಚ್ಚು ಯೋಚಿಸುತ್ತಿದ್ದೀರಿ. ಏನಾಗುತ್ತದೆಯೋ, ಇದಾಗುತ್ತದೆಯೋ, ಅದಾಗುತ್ತದೆಯೋ, ಹೀಗಾಗುತ್ತದೆಯೋ, ಆಗುವುದಿಲ್ಲವೋ ಇಂತಹ ಯೋಚನೆಗಳಲ್ಲಿಯೇ ಹೆಚ್ಚಾಗಿರುತ್ತಿದ್ದಾರೆ. ಆಗಾಗ ಹೀಗಾಗುವುದಿಲ್ಲ ಎಂದು ಯೋಚಿಸುತ್ತಿದ್ದಾರೆ, ಆಗಾಗ ಆಗುತ್ತದೆ ಎಂದು ಯೋಚಿಸುತ್ತಿದ್ದಾರೆ. ಇದಾಗುತ್ತದೆ, ಅದಾಗುವುದಿಲ್ಲ, ಎಂಬ ಈ ಹಾಡನ್ನೇ ಹಾಡುತ್ತಾ ಇದ್ದಾರೆ ಅಷ್ಟೇ ಹೊರತು ಸ್ವಯಂ ಫರಿಶ್ತಾ ಸ್ಥಿತಿಯಲ್ಲಿ ಸಂಪನ್ನ ಸಂಪೂರ್ಣ ಸ್ಥಿತಿಯಲ್ಲಿ ತೀವ್ರ ವೇಗದಿಂದ ಮುಂದಕ್ಕೆ ಹೋಗಬೇಕೆಂಬ ಶ್ರೇಷ್ಠ ಸಂಕಲ್ಪಗಳು ಕಡಿಮೆ ಮಾಡುತ್ತಿದ್ದಾರೆ. ಅದಾಗುತ್ತದೆಯೋ,ಏನಾಗುತ್ತದೆಯೋ ಹೀಗೆ ಯೋ ಯೋ...ಎಂಬ ಹಾಡನ್ನು ಹೆಚ್ಚಾಗಿ ಹಾಡುತ್ತಿದ್ದಾರೆ. ಆದರೆ ತಂದೆ ಹೇಳುತ್ತಿದ್ದಾರೆ ಏನಾದರೂ ಆಗಲಿ ನಿಮ್ಮ ಲಕ್ಷ್ಯ ವೇನು. ಏನಾಗುತ್ತಿದೆಯೋ ಅದನ್ನು ನೋಡುವುದು ಅಥವಾ ಕೇಳುವುದು ನಿಮ್ಮ ಲಕ್ಷ್ಯವೇ ಅಥವಾ ಬ್ರಹ್ಮಾ ತಂದೆಯ ಸಮಾನ ಫರಿಶ್ತಾ ಆಗುವುದೇ? ಅದರ ತಯಾರಿಯನ್ನು ಮಾಡಿದ್ದೀರಾ? ಪ್ರಕೃತಿ ತನ್ನ ರಂಗು ರೂಪವನ್ನು ತೋರಿಸಿದರೂ ನೀವು ಫರಿಶ್ತಾ ಆಗಿ ತಂದೆಯ ಸಮಾನರಾಗಿ ಅವ್ಯಕ್ತ ರೂಪಧಾರಿಯಾಗಿ ಪ್ರಕೃತಿಯ ಪ್ರತಿಯೊಂದು ದೃಶ್ಯವನ್ನು ನೋಡಲು ತಯಾರಾಗಿದ್ದೀರಾ? ಪ್ರಕೃತಿಯ ಏರುಪೇರಿನ ಪ್ರಭಾವದಿಂದ ಮುಕ್ತ ಫರಿಶ್ತಾ ಆಗಿದ್ದೀರಾ? ನಿಮ್ಮ ಸ್ಥಿತಿಯನ್ನು ತಯಾರು ಮಾಡಿಕೊಳ್ಳುವುದರಲ್ಲಿ ನಿಮಗ್ನರಾಗಿದ್ದೀರಾ ಅಥವಾ ಏನಾಗುತ್ತದೆಯೋ ಏನಾಗುತ್ತದೆಯೋ ಎಂಬ ಆಲೋಚನೆಯಲ್ಲಿ ನಿಮಗ್ನವಾಗಿದ್ದೀರಾ? ಯಾವ ಪರಿಸ್ಥಿತಿ ಎದುರಿಗೆ ಬಂದರೂ ಸಹ ಪ್ರಕೃತಿ ಪತಿಯಾದ ನೀವು ಪ್ರಕೃತಿಪತಿ ಎಂಬ ಆಸನದ ಮೇಲೆ ಆಸೀನರಾಗಿದ್ದೀರಾ ಅಥವಾ ಏರುಪೇರು ಆಗುತ್ತಿದ್ದೀರಾ? ಹೀಗಾಯಿತೇನೋ, ಹೀಗಾಗಿ ಬಿಟ್ಟಿತು... ಹೀಗೆ ದೃಶ್ಯಗಳ ವಾರ್ತೆಯಲ್ಲಿ ನಿಮಗ್ನವಾಗಿರುತ್ತೀರಾ ಅಥವಾ ಸಂಪನ್ನ ಸ್ಥಿತಿಯಲ್ಲಿ ಸ್ಥಿತರಾಗಿ ಪ್ರಕೃತಿಯ ಏರುಪೇರನ್ನಾದರೂ ಬಂದು ಹೋಗುವ ಮೇಘಗಳಂತೆ ಅನುಭವ ಮಾಡಿಕೊಳ್ಳುತ್ತೀರಾ? ಆದ್ದರಿಂದ ಬ್ರಹ್ಮಾ ತಂದೆ ಮಕ್ಕಳನ್ನು ಕೇಳುತ್ತಿದ್ದಾರೆ ನನ್ನ ಸಮಾನವಾಗಿ ಸದಾ ಕಾಲದ ಪರಿಶ್ತಾ ಆಗಿದ್ದೀರಾ? ಏಕೆಂದರೆ ಮಕ್ಕಳಾದ ನೀವು ವ್ಯಕ್ತದಲ್ಲಿರುತ್ತಲೂ ಅವ್ಯಕ್ತ ರಾಗಬೇಕು. ಬಾಬಾ ಅಂತೂ ಅವ್ಯಕ್ತ ಆಗಿಬಿಟ್ಟಿದ್ದಾರೆ ನಮ್ಮನ್ನು ಸಹ ಅವ್ಯಕ್ತರನ್ನಾಗಿ ಮಾಡುವುದಿಲ್ಲವೇ ಎಂದು ನೀವು ಹೇಳುತ್ತೀರಿ. ಬ್ರಹ್ಮಾ ತಂದೆ ಹೇಳುತ್ತಿದ್ದಾರೆ ಮೊದಲು ನಿಮ್ಮನ್ನು ನೀವು ಕೇಳಿರಿ ತಂದೆ ವಿಶ್ವಕಲ್ಯಾಣದ ಯಾವ ಜವಾಬ್ದಾರಿ ಕಿರೀಟವನ್ನು ಇಟ್ಟಿದ್ದರೋ ಆ ಕಾರ್ಯವನ್ನು ಸಂಪನ್ನ ಮಾಡಿದ್ದೇನೆಯೇ? ವಿಶ್ವ ಕಲ್ಯಾಣಕಾರಿ ಆಗಿಬಿಟ್ಟಿದ್ದೀರಾ, ವಿಶ್ವಕಲ್ಯಾಣ ಸಂಪನ್ನವಾಗಿ ಬಿಟ್ಟಿದೆಯೇ? ಬ್ರಹ್ಮಾ ತಂದೆ ಏಕೆ

ಅವ್ಯಕ್ತವಾದರೆಂದರೆ ಮಕ್ಕಳಿಗೆ ವಿಶ್ವ ಕಲ್ಯಾಣ ಕಾರ್ಯವನ್ನು ಕೊಟ್ಟು ಬಂಧನದಿಂದ ಮುಕ್ತರಾಗಿ ಸೇವೆಯ ವೇಗವನ್ನು ತೀವ್ರ ಮಾಡಲು ನಿಮಿತ್ತರಾಗಲು ಅವ್ಯಕ್ತವಾದರು. ಇದರ ಪ್ರತ್ಯಕ್ಷತೆಯ ಸ್ವರೂಪ ಈಗ ನಾಲ್ಕು ಕಡೆ ನೋಡುತ್ತಿದ್ದಾರೆ. ಭಾರತ ದೇಶದಲ್ಲಾದರೂ ವಿದೇಶದಲ್ಲಾದರೂ ಅವ್ಯಕ್ತ ಬ್ರಹ್ಮನಿಂದ ವೇಗ ತೀವ್ರವಾಯಿತು ಮತ್ತು ಆಗಲೇಬೇಕು. ಸೇವೆಯಲ್ಲಿ ತೀವ್ರ ವೇಗಕ್ಕೆ ನಿಮಿತ್ತ ಆಧಾರವಾಗಿ ಬ್ರಹ್ಮ ತಂದೆಯೇ ಆಗಬೇಕು. ಆದರೆ ರಾಜ್ಯಾಧಿಕಾರಿಯಾಗಿ ಒಬ್ಬ ಬ್ರಹ್ಮಾ ತಂದೆ ಮಾತ್ರ ಆಗುವುದಿಲ್ಲ. ಬ್ರಹ್ಮಾ ತಂದೆಯೊಂದಿಗೆ ಮಕ್ಕಳು ಸಹ  ರಾಜ್ಯಾಧಿಕಾರವನ್ನು ಪಡೆಯಬೇಕು. ಆದ್ದರಿಂದ ಸಾಕಾರದಲ್ಲಿ ನಿಮಿತ್ತವಾಗಿ ಸಾಕಾರ ರೂಪಧಾರಿ ಮಕ್ಕಳಾದ ನಿಮ್ಮನ್ನು ನಿಮಿತ್ತ ಮಾಡಿದರು.  ಆದರೆ ಅಂತಿಮದಲ್ಲಿ ಮಕ್ಕಳಾದ ನೀವೆಲ್ಲರೂ ವ್ಯಕ್ತ ದಲ್ಲಿ ಇರುತ್ತಲೂ ಅವ್ಯಕ್ತ ಫರಿಶ್ತಾ ಆಗಿ ವಿಶ್ವ ಕಲ್ಯಾಣ ಸೇವೆಯ ವೇಗವನ್ನು ತೀವ್ರ ಮಾಡಿ ಸಮಾಪ್ತಿ ಮತ್ತು ಸಂಪನ್ನರಾಗಬೇಕು ಮತ್ತು ಮಾಡಬೇಕು. ಬ್ರಹ್ಮಾ ತಂದೆ ಕೇಳುತ್ತಿದ್ದಾರೆ 99ನೇ ವರ್ಷದಲ್ಲಿ ಸಮಾಪ್ತಿ ಮಾಡಿಬಿಡಬೇಕೇ? ನೀವು ಫರಿಶ್ತಾ ಸಮಾನವಾಗಿ ಡಬಲ್ ಲೈಟ್ ಆಗಿಬಿಟ್ಟಿದ್ದೀರಾ? ಕಡಿಮೆಯಲ್ಲಿ ಕಡಿಮೆ 108 ಜನ ಇಂತಹ ಸದಾ ವಿಜಯೀ ಆಗಿದ್ದೀರಾ? ಏಕರಸವಾದ ವ್ಯರ್ಥ ಅಥವಾ ವಿರುದ್ಧ ಸಂಕಲ್ಪಗಳು, ಮಾತು ಅಥವಾ ಕರ್ಮ ಅರ್ಥಾತ್ ಸರ್ವರ ಸಂಬಂಧ ಸಂಪರ್ಕಗಳಲ್ಲಿ ಪಾಸ್ ಆಗಿಬಿಟ್ಟಿದ್ದೀರಾ. ವ್ಯರ್ಥ ಅಥವಾ ಅಶುಭ ಈ ಭಾರವೇ ಸದಾ ಕಾಲದ ಡಬಲ್ ಲೈಟ್ ಫರಿಶ್ತಾ ಆಗಲು ಬಿಡುವುದಿಲ್ಲ.  ಆದ್ದರಿಂದ ಬ್ರಹ್ಮಾ ತಂದೆ ಕೇಳುತ್ತಿದ್ದಾರೆ- ಈ ಭಾರದಿಂದ ಹಗುರವಾಗಿ ಫರಿಶ್ತಾ ಆಗಿದ್ದೀರಾ? ಸದಾ ಎಂಬ ಪದವನ್ನು ಅಂಡರ್ ಲೈನ್ ಮಾಡಿಕೊಳ್ಳಿರಿ. ಕಡಿಮೆಯಲ್ಲಿ ಕಡಿಮೆ 108ಜನ ಸದಾ ಪರಿಶ್ತಾ ಜೀವನವನ್ನು ಅನುಭವ ಮಾಡಿಕೊಳ್ಳಬೇಕು. ಆಗಲೇ ಬ್ರಹ್ಮಾ ತಂದೆಯ ಸಮಾನ ಎಂದು ಕರೆಯುತ್ತಾರೆ. ಆದರೆ ಬ್ರಹ್ಮಾ ತಂದೆ ಕೇಳುತ್ತಿದ್ದಾರೆ ಪ್ರಕೃತಿಗೆ ಚಪ್ಪಾಳೆ ಹಾಕಲೇ? 2000ದ ವರ್ಷದಲ್ಲಿ ಮಾಡಲೇ ಅಥವಾ 2001ರಲ್ಲಿ ಮಾಡಲೇ? ಯಾವಾಗ ಮೊಳಗಿಸಬೇಕು? ಚಪ್ಪಾಳೆಯನ್ನು ಹೊಡೆದ ತಕ್ಷಣವೇ ತಯಾರಾಗಿ ಬಿಡುತ್ತೀರಾ? ಚಪ್ಪಾಳೆ ಹೊಡೆದಾಕ್ಷಣ ತಯಾರಾಗಿ ಬಿಡುತ್ತೇವೆ, ಎನ್ನುತ್ತೀರಾ? ಏನು ಯೋಚಿಸುತ್ತಿದ್ದೀರಿ. ಚಪ್ಪಾಳೆ ಹೊಡೆದಾಗ ತಯಾರಾಗುತ್ತೇವೆ ಎಂದಾ? ಚಪ್ಪಾಳೆಯನ್ನು ಹೊಡೆಯಲೇ? ತಯಾರಾಗಿದ್ದೀರಾ? ಹೇಳಿರಿ ಪರೀಕ್ಷೆ ತೆಗೆದುಕೊಳ್ಳಲೇ? ಪರೀಕ್ಷೆ ಇಡಬಹುದೇ? ಎಲ್ಲವನ್ನೂ ಬಿಡಬೇಕಾಗುತ್ತದೆ.

**ಮದುಬನದವರು ಮದುವನವನ್ನು ಬಿಡಬೇಕು, ಜ್ಞಾನ ಸರೋವರದವರು ಜ್ಞಾನ ಸರೋವರವನ್ನು ಬಿಡಬೇಕು, ಸೆಂಟರ್ ನವರು ಸೆಂಟರನ್ನು ಬಿಡಬೇಕು, ವಿದೇಶಿಯರು ವಿದೇಶವನ್ನು, ಎಲ್ಲವನ್ನು ಬಿಡಬೇಕು ಎವೆರೆಡಿಯಾಗಿದ್ದೀರಾ? ಎವರೆಡಿಯಾಗಿದ್ದರೆ ಕೈಯಿಂದ ಚಪ್ಪಾಳೆಯನ್ನು ಹೊಡೆಯಿರಿ. ಪೇಪರ್ ತೆಗೆದುಕೊಳ್ಳಲು ತಯಾರಾಗಿದ್ದೀರಾ?  ನಾಳೆ ಪ್ರಕಟಿಸಲೇ? ಅಲ್ಲಿಗೆ ಹೋಗಿ ಬಿಟ್ಟುಬಿಡುತ್ತೇವೆ ಎನ್ನಬಾರದು. ಅಲ್ಲಿಗೆ ಹೋಗಿ ಸ್ವಲ್ಪ ಸರಿ ಮಾಡಿಕೊಂಡು ಬರುತ್ತೇವೆ ಎನ್ನಬಾರದು. ಎಲ್ಲಿದ್ದರೆ ಅಲ್ಲೇ. ಹೀಗೆ ಎವರೆಡಿಯಾಗಿದ್ದೀರಾ? ನಿಮ್ಮ ಆಫೀಸ್ ಇರುವುದಿಲ್ಲ, ಮಂಚ ಇರುವುದಿಲ್ಲ, ಕೋಣೆ ಇರುವುದಿಲ್ಲ, ಅಲಮಾರಾ ಇರುವುದಿಲ್ಲ,** ಸ್ವಲ್ಪ ಕೆಲಸವಿದೆ ಎರಡು ದಿನಗಳಲ್ಲಿ ಮುಗಿಸಿಕೊಂಡು ಬರುತ್ತೇವೆ ಎನ್ನಬಾರದು. ಆಜ್ಞೆ ಎಂದರೆ ಆಜ್ಞೆಯೇ, ಯೋಚಿಸಿ ಯಾರು ಎಲ್ಲಿಗೆ ಹೋಗಬೇಕು, ಎಲ್ಲಿಗೆ ಹೋಗಬಾರದು ಎಂಬುದು ನಾಳೆ ಆಜ್ಞೆ ಬರುತ್ತದೆ.

ಮಾಡಲೇ, ಆಜ್ಞೆ ಮಾಡಲೇ? ತಯಾರಾಗಿದ್ದೀರಾ? ಅಷ್ಟು ಧೈರ್ಯದಿಂದ ಹಾಗೆಯೇ ಎಂದು ಹೇಳುತ್ತಿಲ್ಲ. ಒಂದು ದಿನವಾದರೂ ಲಭಿಸಿದ್ದರೆ ಚೆನ್ನಾಗಿತ್ತು ಎಂದು ಸ್ವಲ್ಪ ಯೋಚಿಸುತ್ತಿದ್ದೀರಿ. ನಾನು ಇರದೇ ಇದಾಗುವುದಿಲ್ಲ, ಈ ಕಾರ್ಯವಾಗುವುದಿಲ್ಲ ಇಂತಹ ವ್ಯರ್ಥ ಸಂಕಲ್ಪಗಳು ಸಹ ಮಾಡಬಾರದು. ಬ್ರಹ್ಮಾ ತಂದೆ ಟ್ರಾನ್ಸ್ಫರ್ ಆದಾಗ ನಾನಿರದಿದ್ದರೆ ಏನಾಗುತ್ತದೆಯೋ ಏನೋ  ಎಂದು ಯೋಚಿಸಿದ್ದರೇ?  ನಡೆಯುತ್ತದೆಯೋ ಇಲ್ಲವೋ  ಎಂದು ಯೋಚಿಸಿದರೇ? ತನ್ನ ಸಂಪನ್ನ ಸ್ಥಿತಿಯಿಂದ ಆಜ್ಞೆಯನ್ನು ಕೊಟ್ಟರು, ಬಾಯಿಂದಲ್ಲ. ಹೀಗೆ ತಯಾರಾಗಿದ್ದೀರಾ? ಆಜ್ಞೆ ಲಭಿಸಿದಾಕ್ಷಣ ಬಿಡಬೇಕೆಂದರೆ ಬಿಡಬೇಕು ಅಥವಾ ಏರುಪೇರು ಮಾಡುತ್ತೀರಾ? ಹೀಗೆ ಮಾಡಬಾರದು ಎನ್ನುತ್ತೀರಾ?  ಕೇಳಿ ಆಜ್ಞಾಪಿಸುವುದಿಲ್ಲ, ದಿನಾಂಕ ನಿರ್ಣಯಿಸುವುದಿಲ್ಲ, ಬನ್ನಿರಿ ಎಂದು ಅಕಸ್ಮಾತಾಗಿ ಆಜ್ಞಾಪಿಸುತ್ತಾರೆ ಅಷ್ಟೇ.  ಅಂತಹವರನ್ನೇ ಡಬಲ್ ಲೈಟ್ ಫರಿಶ್ತಾ ಎಂದು ಕರೆಯುತ್ತಾರೆ. ಆಜ್ಞೆ ಲಭಿಸಿದಾಕ್ಷಣ ಹೋಗಿಬಿಡಬೇಕು. ಮೃತ್ಯುವಿನ ಆಜ್ಞೆ ಬಂದಾಗ- ಸೆಂಟರ್ ನೋಡಿಕೊಳ್ಳಿರಿ, ಬೀರುವ ನೋಡಿಕೊಳ್ಳಿರಿ, ಜಿಜ್ಞಾಸುಗಳನ್ನು ನೋಡಿಕೊಳ್ಳಿರಿ, ಸ್ಥಾನವನ್ನು ನೋಡಿಕೊಳ್ಳಿರಿ ಎಂದು ಯೋಚಿಸುತ್ತೀರಾ?  **ಈ ದಿನಗಳಲ್ಲಿ ಸ್ಥಾನದ ವಿಷಯದಲ್ಲಿ ನನ್ನದು ನನ್ನದು ಎಂಬ ಜಗಳ ಹೆಚ್ಚಾಗಿ ಬಿಟ್ಟಿದೆ.  ನನ್ನ ಏರಿಯಾ ಎನ್ನುತ್ತಿದ್ದೀರಿ. ವಿಶ್ವಕಲ್ಯಾಣಕಾರಿಗಳಿಗೆ ಸ್ಥಾನದ ಮಿತಿ ಇರುತ್ತದೆಯೇ. ಇವೆಲ್ಲವನ್ನೂ  ಬಿಡಬೇಕಾಗಿರುತ್ತದೆ. ಇದು ಸಹ ಅಭಿಮಾನವೇ ಆಗಿದೆ. ದೆಹಬಾನ ಎಂಬುದು ಹಗುರವಾದ ವಿಷಯ ಆದರೆ ದೇಹಾಭಿಮಾನ ಬಹಳ ಸೂಕ್ಷ್ಮ.  ನನ್ನದು ನನ್ನದು ಎಂಬುದನ್ನೇ ದೆಹಾಭಿಮಾನ ಎಂದು ಕರೆಯುತ್ತಾರೆ. ಎಲ್ಲಿ ನನ್ನದು ಎಂಬುದು ಇರುತ್ತದೆಯೋ ಅಲ್ಲಿ ಅಭಿಮಾನ ತಪ್ಪದೇ ಇರುತ್ತದೆ. ನಿಮ್ಮ ವಿಶೇಷತೆಯ ಬಗ್ಗೆ ಆದರೂ ಇದ್ದರೆ- ಇದು ನನ್ನ ವಿಶೇಷತೆ, ನನ್ನ ಗುಣ, ನನ್ನ ಸೇವೆ ಇವೆಲ್ಲವೂ ನನ್ನದು ಎಂಬ ಭಾವನೆಗಳು. ಇವು ಪ್ರಭುವಿನ ಪ್ರಸಾದ ನನ್ನದು ಅಲ್ಲ ಎಂದು ತಿಳಿಬೇಕು. ಪ್ರಭು ಪ್ರಸಾದವನ್ನು ನನ್ನದು ಎಂದು ಕೊಳ್ಳುವುದು ದೇಹಾಭಿಮಾನವಾಗಿದೆ. ಈ ಅಭಿಮಾನವನ್ನು ಬಿಡುವುದೇ ಸಂಪನ್ನವಾಗಿ ತಯಾರಾಗುವುದು.** ಫರಿಶ್ತಾ ಎಂದರೆ ದೇಹಾಭಿಮಾನ ಇರಬಾರದು, ದೇಹ ಭ್ರಾಂತಿ ಇರಬಾರದು, ವಿಧ ವಿಧವಾದ ನನ್ನದು ಎಂಬ ಬಂಧನಗಳು ಇರಬಾರದು, ಫರಿಶ್ತಾ ಎಂದರೆ ಈ ಹದ್ದಿನ ಬಂಧನಗಳೆಲ್ಲವೂ  ಸಮಾಪ್ತಿ. ಹೀಗೆ ಯಾವಾಗ ತಯಾರಾಗುತ್ತೀರಿ? ಬ್ರಹ್ಮಾ ತಂದೆಯ ಕರೆಯನ್ನು ಗಮನವಿಟ್ಟು ಕೇಳಿರಿ. ಆಹ್ವಾನಿಸುತ್ತಿದ್ದಾರೆ. ಬಾಬಾ ಹೇಳುತ್ತಿದ್ದಾರೆ ಸಮಾಪ್ತಿಯ ನಗಾರಿಯು ಮೊಳಗಿಸುವುದು ಬಹಳ ಸಹಜವಾಗಿದೆ. ಯಾವಾಗ ಬೇಕಾದರೂ ಮೊಳಗಿಸಬಹುದು. ಆದರೆ ಕಡಿಮೆಯಲ್ಲಿ ಕಡಿಮೆ ಸತ್ಯಯುಗದ ಆದಿ 9ಲಕ್ಷ ಎವರೆಡೀ ಆಗಬೇಕಲ್ಲವೇ!  ನಂಬರ್‌ವನ್‌ಆಗಿ ಕೆಲವೇ ಆಗುತ್ತಾರೆ, ಉಳಿದವರು ನಂಬರ್‌ವಾರ್, ಆದರೂ  ಕಡಿಮೆಯಲ್ಲಿ ಕಡಿಮೆ 108 ಜನ ನಂಬರ್‌ವನ್, 16 ಸಾವಿರ ಜನ ಎರಡನೇ ನಂಬರ್, 9ಲಕ್ಷ ಮೂರನೇ ನಂಬರ್ ಇಷ್ಟುಜನ ತಯಾರಾಗಬೇಕು. ರಾಜಧಾನಿ ಅಂತೂ ತಯಾರಾಗಬೇಕಲ್ಲವೇ!

ಈಗ ಫಲಿತಾಂಶದಲ್ಲಿ ಬಾಪ್‌ದಾದಾ ವರ್ತಮಾನ ಸಮಯದಲ್ಲಿ ಮಾಯೆಯು  ಅಶುಭ ಮತ್ತು ವ್ಯರ್ಥ ಸಂಕಲ್ಪಗಳ ಸ್ವರೂಪದಲ್ಲಿ ಹೆಚ್ಚು ಜನರಲ್ಲಿ ಇರುವುದನ್ನು ನೋಡಿದರು. ವಿಶ್ವಕಲ್ಯಾಣಕಾರಿ  ಸ್ಥಿತಿ ಎಂದರೆ ಸದಾ ಬೇಹದ್ ವೃತ್ತಿ, ದೃಷ್ಟಿ ಮತ್ತು ಬೇಹದ್ ಸ್ಥಿತಿ ಇರಬೇಕು. ವೃತ್ತಿಯಲ್ಲಿ ಸ್ವಲ್ಪ ಯಾವ ಆತ್ಮನ ಪ್ರತಿಯೂ ಅಶುಭ ಅಥವಾ ವ್ಯರ್ಥ ಭಾವನೆ ಇರಬಾರದು ಎಂಬುದು ಬೇರೆ ವಿಷಯ ಆದರೆ ಸ್ವಯಂ ಅಶುಭ ವೃತ್ತಿಯಲ್ಲಿ ಇರುವವರು ಇತರರ ಅಶುಭವನ್ನು ಶುಭದಲ್ಲಿ ಪರಿವರ್ತನೆ

ಮಾಡಲಾಗುವುದಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಸ್ವಯಂನ್ನು ಸೂಕ್ಷ್ಮ ಪರಿಶೀಲನೆ ಮಾಡಿಕೊಳ್ಳಬೇಕು. ನನ್ನ ವೃತ್ತಿ, ದೃಷ್ಟಿ ಸರ್ವರ ಪ್ರತಿ ಸದಾ ಬೇಹದ್ ಮತ್ತು ವಿಶ್ವಕಲ್ಯಾಣಕಾರಿಯಾಗಿ ಇದೆಯೇ? ಎಂದು. ಕಲ್ಯಾಣ ಭಾವನೆಯ ಹೊರತು ಸ್ವಲ್ಪವೂ ಹದ್ದಿನ ಭಾವನೆ, ಹದ್ದಿನ ಸಂಕಲ್ಪ, ಮಾತು ಸೂಕ್ಷ್ಮದಲ್ಲಿಯೂ ಇಲ್ಲವೇ ಎಂದು ಪರಿಶೀಲಿಸಿಕೊಳ್ಳಬೇಕು. ಸೂಕ್ಷ್ಮದಲ್ಲಿ ಇರುವುದರ ಗುರುತು ಏನಂದರೆ ಆ ಸಮಯ ಬಂದಾಗ ಅಥವಾ ಸಮಸ್ಯೆ ಬಂದಾಗ ಆ ಸೂಕ್ಷ್ಮವು ಸ್ಥೂಲದಲ್ಲಿ ಬದಲಾಗಿಬಿಡುತ್ತದೆ. ಸದಾ ಚೆನ್ನಾಗಿಯೇ ಇರುತ್ತಾರೆ ಆದರೆ ಸಮಯ ಬಂದಾಗ ಅದು ಪ್ರತ್ಯಕ್ಷವಾಗಿ ಬಿಡುತ್ತದೆ. ಆನಂತರ ಇವರು ಇರುವುದೇ ಹೀಗಲ್ಲವೇ, ಈ ವಿಷಯವೇ ಅಂತಹದ್ದಾಗಿತ್ತು, ಈ ವ್ಯಕ್ತಿಯೇ ಅಂತವರು ಎಂದುಕೊಳ್ಳುತ್ತಾರೆ. ವ್ಯಕ್ತಿ ಅಂತವರೇ, ಆದರೆ ನನ್ನ ಸ್ಥಿತಿಯಲ್ಲಿ ಶುಭಭಾವನೆ, ಬೇಹದ್ ಭಾವನೆ ಇದೆಯೇ? ಇಲ್ಲವೇ? ಹೀಗೆ ನಿಮ್ಮ ತಪ್ಪನ್ನು ಪರಿಶೀಲಿಸಿಕೊಳ್ಳಿರಿ. ಅರ್ಥವಾಯಿತೇ?

ವಿಷಯಗಳನ್ನು ನೋಡಬೇಡಿ, ನಿಮ್ಮನ್ನು ನೀವು ನೋಡಿಕೊಳ್ಳಿರಿ. 99ನೆಯ ವರ್ಷದಲ್ಲಿ ನಿಮ್ಮೊಳಗೆ ಇದೇ ಗಮನವಿಟ್ಟುಕೊಳ್ಳಿರಿ. ಯಾವುದಾದರೆ ಬ್ರಹ್ಮಾ ತಂದೆಯ ಹೆಜ್ಜೆಯಾಗಿದೆಯೋ, ಬ್ರಹ್ಮ ತಂದೆಯ ಸಮಾನವಾಗಿ ನನ್ನ ಹೆಜ್ಜೆಯೂ ಇರಬೇಕು ಎಂಬ ಗಮನವಿರಲಿ. ಬ್ರಹ್ಮಾತಂದೆ ಎಂದರೆ ಎಲ್ಲರಿಗೂ ಪ್ರೀತಿಯಿದೆಲ್ಲವೇ, ಪ್ರಿಯವಾದವರನ್ನೇ ಅನುಸರಿಸುತ್ತಾರಲ್ಲವೇ? ಬಾಬಾ ಸಮಾನರಾಗಿ ಆಗಲೇಬೇಕು. 99ನೆಯ ವರ್ಷದಲ್ಲಿ ಎಲ್ಲರೂ ತಯಾರಾಗಿ ಬಿಡುತ್ತೀರಾ? ಒಂದು ವರ್ಷದ ಸಮಯವಿದೆ, ಇದಾಯಿತು, ಇದಾಯಿತು ಎಂದು ಯೋಚಿಸಬೇಡಿರಿ. ಅದು ಆಗಲೇಬೇಕು, ಅದು ನಡೆಯಲೇಬೇಕು ಎಂದು ನಿಮಗೆ ಮೊದಲೇ ತಿಳಿದಿದೆಯಲ್ಲವೇ. ಆದ್ದರಿಂದ ಏನಾದರೂ ಆಗಲಿ ತಂದೆಯ ಸಮಾನವಾದ ಫರಿಶ್ತಾ ಆಗಲೇಬೇಕು, ಅರ್ಥವಾಯಿತೆ? ಮಾಡಬೇಕಲ್ಲವೇ, ಮಾಡಬಲ್ಲಿರಾ? ಒಂದು ವರ್ಷದಲ್ಲಿ ತಯಾರಾಗಿ ಬಿಡುತ್ತೀರಾ ಅಥವಾ ಆರು ತಿಂಗಳಲ್ಲಿ ತಯಾರಾಗಿ ಬಿಡುತ್ತೀರಾ? ಸಂಪನ್ನರಾಗಲು ಬ್ರಹ್ಮತಂದೆ ಸಹ ನಿಮ್ಮನ್ನು ಆಹ್ವಾನಿಸುತ್ತಿದ್ದಾರೆ ಮತ್ತು ಪ್ರಕೃತಿಯು ಕಾಯುತ್ತಿದೆ. ಹೋಗಲಿ ಆರು ತಿಂಗಳಲ್ಲ, ಒಂದು ವರ್ಷದಲ್ಲಿ ಆಗಿರಿ. ಏರುಪೇರಿನಲ್ಲಿ ಬರಬಾರದು, ಅಚಲವಾಗಿ ಇರಬೇಕು. ಏನೇ ಆದರು ತಂದೆಯ ಸಮಾನರಾಗಲೇಬೇಕು ಎಂಬ ಲಕ್ಷ್ಯವನ್ನು ಬಿಡಬಾರದು. ಯಾರಾದರೂ ಬ್ರಾಹ್ಮಣರು ಅಲುಗಾಡಿಸಿದರೂ, ವಿಘ್ನವಾಗಿ ಎದುರಿಗೆ ಬಂದರೂ, ತಂದೆಯ ಸಮಾನ ತಯಾರಾಗಲೇಬೇಕು, ಎಂದುಕೊಳ್ಳಬೇಕು. ಈ ಸಲಹೆ ಇಷ್ಟವೇನಾ? (ಬಾಪ್‌ದಾದಾ ಎಲ್ಲರಿಂದ ಕೈಯನ್ನು ಎತ್ತಿಸಿದರು ಮತ್ತು ಎಲ್ಲರ ಫೋಟೋ, ವಿಡಿಯೋ ತೆಗೆಸಿದರು) ಈ ಫೋಟೋ ಎಲ್ಲರಿಗೂ ಕಳಿಸುತ್ತೇನೆ. ಈ ವಿಡಿಯೋದಲ್ಲಿ ಯಾರಾದರೂ ಮಿಸ್ ಆಗಬಹುದು ಆದರೆ ವತನದ ವಿಡಿಯೋದಲ್ಲಿ ಯಾರೂ ಮಿಸ್ ಆಗಲು ಸಾಧ್ಯವಿಲ್ಲ. ಒಳ್ಳೆಯದು.

ಬಾಬಾ ಹೇಳುತ್ತಿದ್ದಾರೆ. ಒಂದು ಕ್ಷಣದಲ್ಲಿ ಎಲ್ಲರೂ ಈಗಲೇ ವಿದೇಹಿ ಸ್ಥಿತಿಯಲ್ಲಿ ಸ್ಥಿತರಾಗಿರಿ. (ಡ್ರಿಲ್) ಒಳ್ಳೆಯದು. ಈಗ ದೇಹದಲ್ಲಿ ಬನ್ನಿರಿ ಮತ್ತೆ ವಿದೇಹಿಯಾಗಿರಿ. ಇಡೀ ದಿನ ಪದೇ ಪದೇ ಈ ಅಭ್ಯಾಸ ಮಾಡುತ್ತಾ ಇರಿ. ಒಳ್ಳೆಯದು.

**ಸದಾ ಬ್ರಹ್ಮಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಇಟ್ಟು ಫಾಲೋ ಫಾದರ್ ಮಾಡುವ ಆಜ್ಞಾಕಾರಿ ಮಕ್ಕಳಿಗೆ, ಸದಾ ಬ್ರಹ್ಮಾ ತಂದೆಯ ಸಮಾನವಾಗಿ ಫರಿಶ್ತಾ ಸ್ಥಿತಿಯಲ್ಲಿ ಸ್ಥಿತರಾಗುವ ಸಮೀಪ ಆತ್ಮರಿಗೆ, ಸದಾ ಪ್ರಕೃತಿ ಪತಿಯಾಗಿ ಪ್ರಕೃತಿಯ ಪ್ರತಿಯೊಂದು ದೃಶ್ಯವನ್ನು ಸಾಕ್ಷಿಯಾಗಿ ನೋಡುವಂತಹ ಅಚಲ, ಸ್ಥಿರವಾದ ಆತ್ಮರಿಗೆ, ಸದಾ ಬೇಹದ್ ವೃತ್ತಿ ಮತ್ತು**

**ದೃಷ್ಟಿಯಲ್ಲಿ ಇರುವ ಭಾಗ್ಯವಾನ್ ಮಕ್ಕಳಿಗೆ, ಬಾಪ್‌ದಾದಾರವರ ಪ್ರಿಯಸ್ಮೃತಿಗಳು ಮತ್ತು ನಮಸ್ತೆ. ಯಾರಾದರೇ ದೇಶವಿದೇಶಗಳಲ್ಲಿ ಮುರಳಿಯನ್ನು ಕೇಳುತ್ತಿದ್ದೀರೋ ಆ ಮಕ್ಕಳೆಲ್ಲರಿಗೂ ವಿಶೇಷ ಪ್ರಿಯಸ್ಮೃತಿಗಳು.**

ರಿವೈಸ್ ಕೋರ್ಸ್ 12-12-1998.

***ನನ್ನದು, ನನ್ನದು ಎಂಬ ದೆಹಬಿಮಾನವನ್ನು ಬಿಟ್ಟು ಬ್ರಹ್ಮಾ ತಂದೆಯ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡಿ.***

ಹೊಸ ಮಾರ್ಗ ಹುಡುಕುವ ಅವಶ್ಯಕತೆ ಇಲ್ಲ. ಪಾದದ ಮೇಲೆ ಪಾದ ಅರ್ಥಾತ್ ಹೆಜ್ಜೆಯ ಮೇಲೆ ಹೆಜ್ಜೆ ಇಡಬೇಕು. ಯಾವ ಕಾರ್ಯ ಮಾಡುತ್ತಿದ್ದರೂ, ಮನಸಾ ಸಂಕಲ್ಪ ಮಾಡುತ್ತಿದ್ದರೂ, ವಾಚದಿಂದ ಮಾತನಾಡುತ್ತಿದ್ದರೂ, ಕರ್ಮದಲ್ಲಿ ಸಂಬಂಧ ಸಂಪರ್ಕಗಳಲ್ಲಿ ಬರುತ್ತಿದ್ದರೂ ಪ್ರತಿಯೊಂದು ಕರ್ಮ ಮಾಡುವ ಮೊದಲು ಯೋಚಿಸಿರಿ. ಬ್ರಾಹ್ಮಣಾತ್ಮನಾದ ನಾನು ಯಾವ ಕರ್ಮ ಮಾಡುತ್ತಿದ್ದೇನೆಯೋ ಅದು ಬ್ರಹ್ಮಾ ತಂದೆಯ ಸಮಾನವಾಗಿ ಇದೆಯೇ? ಬ್ರಹ್ಮ ತಂದೆಯ ಸಂಕಲ್ಪ ಯಾವ ರೀತಿ ಇತ್ತೋ ನನ್ನ ಸಂಕಲ್ಪವೂ ಅದೇ ರೀತಿ ಇದೆಯೇ? ಪ್ರತಿಯೊಂದು ಮಾತು ಬ್ರಹ್ಮಾತಂದೆಯ ಸಮಾನವಾಗಿ ಇದೆಯೇ? ಒಂದುವೇಳೆ ಸಮಾನವಾಗಿ ಇರದಿದ್ದರೆ ಮಾಡಬಾರದು, ಯೋಚಿಸಬಾರದು, ಮಾತನಾಡಬಾರದು. ಹೀಗೆ ಬ್ರಹ್ಮಾ ತಂದೆಯ ಕರ್ಮ ಎಂಬ ಪ್ರತಿಯೊಂದು ಹೆಜ್ಜೆಯ ಸಮಾನವಾಗಿ ಹೆಜ್ಜೆಯನ್ನು ಹಾಕಿ ನಡೆದರೆ ಸದಾ ಸ್ವಯಂನ್ನು ಸಹಜ ಪುರುಷಾರ್ಥಿಯನ್ನಾಗಿ ಅನುಭವ ಮಾಡಿಕೊಳ್ಳುತ್ತೀರಿ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಜನ್ಮದಿಂದಲೇ ಸ್ಮೃತಿ ತಿಲಕಧಾರಿ, ಪವಿತ್ರತೆಯ ಪ್ರಕಾಶ ಕಿರೀಟಧಾರಿ, ವಿಶ್ವಕಲ್ಯಾಣದ ಜವಾಬ್ದಾರಿ ಕಿರೀಟಧಾರಿಯಾಗಿ ಮತ್ತು ತಂದೆ ಹೃದಯ ಸಿಂಹಾಸನಾಧಿಕಾರಿ ಆಗಿದ್ದೇನೆ.

2. ನನ್ನ ಮಸ್ತಕದಲ್ಲಿ ಭಾಗ್ಯದ ನಕ್ಷತ್ರ ಸದಾ ಹೊಳೆಯುತ್ತಾ ಇದೆ.

3. ನನ್ನಲ್ಲಿ ಸೂರ್ಯವಂಶಿ, ನಂಬರ್‌ವನ್ ಆಗುವ ಲಕ್ಷ್ಯ ಮತ್ತು ಲಕ್ಷಣಗಳು ಸಮಾನವಾಗಿ ಇವೆ.

4. ನಾನು ಬ್ರಹ್ಮಾ ತಂದೆಯನ್ನು ಅನುಸರಿಸಿ ಸದಾ ಏಕರಸಸ್ಥಿತಿ ಮತ್ತು ಸದಾ ವಿಜಯಿಯಾಗುವ ನಂಬರ್‌ವನ್ ಸೂರ್ಯವಂಶಜನು.

5. ಬ್ರಾಹ್ಮಣಾತ್ಮನಾದ ನಾನು ಯಾವ ಕಾರ್ಯವನ್ನು ಮಾಡುತ್ತಿದ್ದರೂ, ಮನಸಾ ಸಂಕಲ್ಪ ಮಾಡುತ್ತಿದ್ದರೂ, ವಾಚಾದಿಂದ ಮಾತನಾಡುತ್ತಿದ್ದರೂ, ಕರ್ಮದಲ್ಲಿ ಸಂಬಂಧ ಸಂಪರ್ಕಗಳಲ್ಲಿ ಬರುತ್ತಿದ್ದರೂ, ಪ್ರತಿಯೊಂದು ಕರ್ಮ ಮಾಡುವ ಮೊದಲು ಬ್ರಹ್ಮಾ ತಂದೆಯ ಸಮಾನವಾಗಿ ಇದೆಯೇ ಎಂದು ಪರಿಶೀಲಿಸಿ ಮಾಡುತ್ತಿದ್ದೇನೆ.

6. ನಾನು ಬ್ರಹ್ಮಾ ತಂದೆಯ ಕರ್ಮ ಎಂಬ ಪ್ರತಿಯೊಂದು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಅನುಸರಿಸಿ ಸ್ವಯಂ ಅನ್ನು ಸಹಜ ಪುರುಷಾರ್ಥಿಯಾಗಿ ಮತ್ತು ಸಂಪೂರ್ಣತೆಗೆ ಸಮೀಪವಾಗಿ ಅನುಭವ ಮಾಡಿಕೊಂಡಿದ್ದೇನೆ.

7. ಏನಾಗುತ್ತದೆಯೋ, ಹೀಗಾಗುತ್ತದೆಯೋ, ಹಾಗಾಗುತ್ತದೆಯೋ, ಆಗುವುದಿಲ್ಲವೋ ಎಂಬ ಯೋಚನೆಗಳನ್ನು ಸಮಾಪ್ತಿ ಮಾಡಿ ಸ್ವಯಂ ಫರಿಶ್ತಾ ಸ್ಥಿತಿಯಲ್ಲಿದ್ದು, ಸಂಪೂರ್ಣ ಸಂಪನ್ನ ಸ್ಥಿತಿಯಲ್ಲಿದ್ದು ತೀವ್ರ ವೇಗದಿಂದ ಮುಂದಕ್ಕೆ ಹೋಗಬೇಕೆಂಬ ಶ್ರೇಷ್ಠ ಸಂಕಲ್ಪಗಳನ್ನು ಮಾಡುತ್ತಿದ್ದೇನೆ.

8. ಪ್ರಕೃತಿ ತನ್ನ ಯಾವ ರಂಗು ರೂಪಗಳನ್ನು ತೋರಿಸಿದರೂ ನಾನು ಫರಿಶ್ತಾ ಆಗುವ ತಂದೆಯ ಸಮಾನವಾಗುವ, ಅವ್ಯಕ್ತ ರೂಪಧಾರಿಯಾಗಿ ಪ್ರಕೃತಿಯ ಪ್ರತಿಯೊಂದು ದೃಶ್ಯವನ್ನು ನೋಡುತ್ತಿದ್ದೇನೆ.

9. ನಾನು ನನ್ನ ಸಂಪನ್ನ ಸ್ಥಿತಿಯಲ್ಲಿ ಸ್ಥಿತವಾಗಿ ಪ್ರಕೃತಿಯ ಯಾವ ಏರುಪೇರನ್ನಾದರೂ ಬಂದು ಹೋಗುವ ಮೇಘಗಳಂತೆ ಅನುಭವ ಮಾಡುವ ಪ್ರಕೃತಿ ಪತಿಯಾಗಿದ್ದೇನೆ.

10. ಮಕ್ಕಳಾದ ನಾವೆಲ್ಲರೂ ವ್ಯಕ್ತದಲ್ಲಿ ಇರುತ್ತಾ ಅವ್ಯಕ್ತ ಫರಿಶ್ತಾ ಆಗಿ ವಿಶ್ವಕಲ್ಯಾಣದ ಸೇವೆಯ ವೇಗವನ್ನು ತೀವ್ರ ಮಾಡಿ ಸಮಾಪ್ತಿ ಮತ್ತು ಸಂಪನ್ನವಾಗುವ ಮತ್ತು ತಯಾರು ಮಾಡುವ ಜವಾಬ್ದಾರಿ ಕಿರೀಟಧಾರಿ ಎಂಬ ಸ್ಮೃತಿಯಲ್ಲಿದ್ದೇನೆ.

11. ನಾನು ಯಾವ ವಿಧವಾದ ವ್ಯರ್ಥವನ್ನು ಅಥವಾ ವಿರುದ್ಧ ಸಂಕಲ್ಪಗಳನ್ನು, ಮಾತು ಅಥವಾ ಕರ್ಮ ಅರ್ಥಾತ್ ಸರ್ವರ ಸಂಬಂಧ ಸಂಪರ್ಕಗಳಲ್ಲಿ ಪಾಸಾಗಿ ಸದಾ ವಿಜಯಿ ಆಗಿರುವ ಡಬಲ್ ಲೈಟ್ ಫರಿಸ್ತಾ ಸ್ವರೂಪ.

12. ನಾನು ಎವರೆಡಿಯಾಗಿರುವ ಡಬಲ್ ಲೈಟ್ ಫಾರಿಶ್ತಾ ಸ್ವರೂಪ.

13. ನಾನು ಬೇಹದ್ ವಿಶ್ವಕಲ್ಯಾಣಕಾರಿ ಯಾಗಿದ್ದೇನೆ.

14. ನಾನು ನನ್ನ ವಿಶೇಷತೆ, ನನ್ನ ಗುಣ, ನನ್ನ ಸೇವೆ, ನನ್ನದು, ನನ್ನದು ಎಂಬ ದೇಹಾಭಿಮಾನವನ್ನು ಸಮಾಪ್ತಿ ಮಾಡಿ ಇದು ಪ್ರಭುವಿನ ಪ್ರಸಾದವಾಗಿದೆ ಎಂದು ಭಾವಿಸುತ್ತಿದ್ದೇನೆ.

15. ನಾನು ದೇಹಾಭಿಮಾನವನ್ನು, ದೇಹಬಾನವನ್ನು, ವಿಧವಿಧವಾದ ನನ್ನದು ಎಂಬ ಹದ್ದಿನ ಬಂಧನಗಳನ್ನು ಸಮಾಪ್ತಿ ಮಾಡಿರುವ ಫರಿಶ್ತಾ ಸ್ವರೂಪ.

16. ನನ್ನ ವೃತ್ತಿ, ದೃಷ್ಟಿ ಸರ್ವರ ಪ್ರತಿ ಸದಾ ಬೆಹದ್ ಮತ್ತು ಕಲ್ಯಾಣಕಾರಿಯಾಗಿ ಇವೆಯೇ ಎಂದು ಸ್ವಯಂ ಅನ್ನು ಸೂಕ್ಷ್ಮ ಪರಿಶೀಲನೆ ಮಾಡಿಕೊಂಡು ಪರಿವರ್ತಿಸಿಕೊಂಡಿದ್ದೇನೆ.

17. ನಾನು ಏನಾದರೂ ಆಗಲಿ ನಾನು ತಂದೆಯ ಸಮಾನವಾಗಿ ಫರಿಶ್ತಾ ಆಗಲೇಬೇಕು ಎಂಬ ಲಕ್ಷ್ಯವನ್ನು ಧಾರಣೆ ಮಾಡಿದ್ದೇನೆ.

18. ನಾನು ಒಂದು ಕ್ಷಣದಲ್ಲಿ ವಿದೇಹಿ ಸ್ಥಿತಿಯಲ್ಲಿ ಸ್ಥಿತವಾಗಿ ಮತ್ತೆ ದೇಹದಲ್ಲಿ ಬಂದು ವಿದೇಹಿಯಾಗುವ ಅಭ್ಯಾಸವನ್ನು (ಡ್ರಿಲ್) ದಿನವಿಡೀ ಪದೇ ಪದೇ ಮಾಡುತ್ತಿದ್ದೇನೆ.